# MAYA CARE FOUNDATION

## ವರದಿ ಪತ್ರಿಕೆ

Year: 2nd Issue: 1st
ಅಕ್ಟೋಬರ್ - ಡಿಸೆಂಬರ್ 2025

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ


## ಸಂಪಾದಕೀಯ

ಮಾನವೀಯತೆ, ಸೇವಾ ಮನೋಭಾವ ಮತ್ತು ಸಂಸ್ಕೃತಿಯ ಬೆಳಕು

ಹಿರಿಯ ನಾಗರಿಕರು ತಮ್ಮ ಅನುಭವದ ಬೆಳಕಿನಲ್ಲಿ ಮುಂದಿನ ಪೀಳಿಗೆಗೆ ನೈತಿಕತೆ, ಸಂಸ್ಕೃತಿ ಮತ್ತು ಬದುಕಿನ ಪಾಠಗಳನ್ನು ಕಲಿಸುತ್ತಾರೆ. ಆದರೆ ವಯಸ್ಸಿನ 60ನೇ ದಶಕದ ನಂತರ ಅವರ ಮನಸ್ಥಿತಿ ಪುಟ್ಟ ಮಕ್ಕಳಂತಾಗುತ್ತದೆ. ಸಣ್ಣ ವಿಷಯಕ್ಕೂ ಕೋಪಿಸಿಕೊಳ್ಳುವುದು, ಹಠ ಮಾಡುವುದು, ಹೇಳಿದ ಮಾತುಗಳಿಗೆ ಕಿವಿ ಕೊಡದೆ ತಮಗೆ ತಿಳಿದಂತೆಯೇ ನಡೆದುಕೊಳ್ಳುವುದು ಇತ್ಯಾದಿ ಲಕ್ಷಣಗಳು ಕಾಣಿಸುತ್ತವೆ. ಇಂತಹ ಸಂದರ್ಭದಲ್ಲಿ ಅವರ ವರ್ತನೆಯನ್ನು ದೂಷಿಸದೆ, ಅವರ ಮನಸ್ಥಿತಿಯನ್ನು ಅರಿತು, ಪ್ರೀತಿಯಿಂದ ಪಾಲನೆ ಪೋಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅವರ ಜೀವನದ ಕೊನೆಯ ಹಾದಿಯಲ್ಲಿ ಕೈ ಹಿಡಿದು ನಡೆಸುವುದು ನಮ್ಮ ಜವಾಬ್ದಾರಿಯಾಗಿದೆ.

ಈ ನಿಸ್ವಾರ್ಥ ಸೇವಾ ಮನೋಭಾವವನ್ನು ಮಾಯಾ ಕೇರ್ ಫೌಂಡೇಶನ್ ತನ್ನ ಕಾರ್ಯದ ಮೂಲಕ ಪ್ರತಿಬಿಂಬಿಸುತ್ತಿದೆ. ಅಂಗವಿಕಲತೆ ಶಾಪವಲ್ಲ; ಇದು ಪೋಷಕಾಂಶಗಳ ಕೊರತೆ, ಪೋಲಿಯೋ ಲಸಿಕೆಯ ಕೊರತೆ ಅಥವಾ ತಲೆಮಾರುಗಳ ಬಳುವಳಿಯಿಂದ ಉಂಟಾಗಬಹುದು. ಹಿಂದಿನ ಕಾಲದಲ್ಲಿ ಅಂಗವಿಕಲರನ್ನು ಮೂಲೆಗುಂಪು ಮಾಡಲಾಗುತ್ತಿತ್ತು. ಆದರೆ ಇಂದು ತಂತ್ರಜ್ಞಾನ ಮತ್ತು ಶಿಕ್ಷಣದ ನೆರವಿನಿಂದ ಅವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. "ಅಯ್ಯೋ ಪಾಪ" ಎನ್ನುವ ಬದಲು, ಅವರಿಗೆ ಅವಕಾಶಗಳನ್ನು ಕಲ್ಪಿಸಿ, ಅವರ ಸಾಮರ್ಥ್ಯವನ್ನು ಗುರುತಿಸಿ, ಅವರ ಏಳಿಗೆಗೆ ಶ್ರಮಿಸುವುದು ನಮ್ಮೆಲ್ಲರ ದೇಹವಾಗಬೇಕು.

ಮಾಯಾ ಕೇರ್ ಫೌಂಡೇಶನ್‌ನಲ್ಲಿ ಉದ್ಯೋಗ ಮಾಡುತ್ತಿರುವ ಎಲ್ಲ ಸದಸ್ಯರೂ ಒಂದಲ್ಲೊಂದು ರೀತಿಯ ಅಂಗವೈಫಲ್ಯ ಹೊಂದಿರುವವರು. ಅವರು ದೇಶದ ವಿವಿಧ ರಾಜ್ಯಗಳಿಂದ ಸೇರ್ಪಡೆಗೊಂಡು, ತರಬೇತಿ ಪಡೆದು, ತಮ್ಮ ಕಾಲುಗಳ ಮೇಲೆ ನಿಲ್ಲುತ್ತಿದ್ದಾರೆ. ಇದು ನಮ್ಮೆಲ್ಲರಿಗೂ ಹೆಮ್ಮೆ ತಂದಿರುವ ವಿಷಯ. ಈ ಮಾದರಿಯನ್ನು ಅನುಸರಿಸಿ ಉತ್ತಮ ಸಮಾಜದ ಕಡೆಗೆ ಹೆಜ್ಜೆ ಹಾಕೋಣ.

ಮಾಯಾ ಕೇರ್ ಫೌಂಡೇಶನ್‌ನ ಸ್ವಯಂಸೇವಕರು ಸಂಸ್ಥೆಯ ಹೃದಯಸ್ವರೂಪವಾಗಿದ್ದಾರೆ. ಅವರು ಹಿರಿಯ ನಾಗರಿಕರ ಮನೆಗಳಿಗೆ ಭೇಟಿ ನೀಡಿ, ಅವರ ಆರೋಗ್ಯ, ಭಾವನೆ ಮತ್ತು ಅಗತ್ಯಗಳನ್ನು ಅರಿದು ಸಹಾಯ ಮಾಡುತ್ತಾರೆ. ವೈದ್ಯಕೀಯ ನೆರವು, ದಿನಚರಿಯ ಕೆಲಸಗಳಲ್ಲಿ ಸಹಾಯ, ಮತ್ತು ಮಾನಸಿಕ ಬೆಂಬಲ ನೀಡುವಲ್ಲಿ ಅವರು ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಹವಾಮಾನ, ಸಮಯ, ದೂರ ಎನ್ನದೆ ಅವರು ಕ್ಷೇತ್ರಮಟ್ಟದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸೇವಾ ಮನೋಭಾವ ಮತ್ತು ತ್ಯಾಗವೇ ಸಂಸ್ಥೆಯ ಯಶಸ್ಸಿಗೆ ಬಲವಾದ ಆಧಾರವಾಗಿದೆ. ಇಂತಹ ಸ್ವಯಂಸೇವಕರ ಶ್ರಮದಿಂದ ಹಿರಿಯ ನಾಗರಿಕರಿಗೆ ಗೌರವಯುತ ಜೀವನದ ಅನುಭವ ದೊರೆಯುತ್ತಿದೆ.

ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು! ಈ ಹಬ್ಬವನ್ನು ಆಚರಿಸುವ ಹಿಂದಿನ ಕಾರಣಗಳನ್ನು ತಿಳಿದುಕೊಳ್ಳುವುದು ನಮ್ಮ ಸಂಸ್ಕೃತಿಯ ಅರಿವಿಗೆ ದಾರಿ ಮಾಡಿಕೊಡುತ್ತದೆ. ನರಕಾಸುರನ ಅಂತ್ಯ, ರಾಮ-ಸೀತೆಯ ಸ್ವಾಗತ, ಬಲಿ ಚಕ್ರವರ್ತಿಯ ಕಥೆ—ಇವೆಲ್ಲ ದೀಪಾವಳಿಯ ಆಚರಣೆಗೆ ಕಾರಣಗಳಾಗಿವೆ. ದೀಪಗಳ ಹಬ್ಬವಾದ ದೀಪಾವಳಿಯಲ್ಲಿ ದೀಪಗಳನ್ನು ಅಚ್ಚಿಸಿ, ಬೆಳಕಿನಿಂದ ಅಲಂಕಾರ ಮಾಡಿ, ಸಂತೋಷವನ್ನು ಹಂಚಿಕೊಳ್ಳೋಣ.

# ಫಲಾನುಭವಿಗಳಿಂದ ಪ್ರತಿಕ್ರಿಯೆ

ಕಶಿಕ ಸೇವಾ ಟ್ರಸ್ಟ್, ಬೆಂಗಳೂರು **+91 95383 59402**

ರಕ್ಷಾ ಬಂಧನ ಹಬ್ಬದ ಸಂದರ್ಭದಲ್ಲಿ ನಮ್ಮ ನಿವಾಸಿಗಳಿಗೆ ಸಂತೋಷ ಮತ್ತು ಹಬ್ಬದ ಉತ್ಸಾಹವನ್ನು ತಂದುಕೊಟ್ಟ ಸಖಿ ಮತ್ತು ಮಾಯಾ ಕೇರ್ ಫೌಂಡೇಶನ್‌ಗೆ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ರಾಖಿ ಕಟ್ಟುವ ಸರಳ ಆದರೆ ಅರ್ಥಪೂರ್ಣ ಕ್ರಿಯೆ ಮತ್ತು ಹಣ್ಣುಗಳನ್ನು ಹಂಚುವ ಕಾರ್ಯವು ಪ್ರೀತಿಯಿಂದ, ನಗುಮುಗುಳಿಯಿಂದ ಹಾಗೂ ಭಾವನಾತ್ಮಕ ಸಂಪರ್ಕದಿಂದ ತುಂಬಿದ ಹಬ್ಬದ ವಾತಾವರಣವನ್ನು ನಿರ್ಮಿಸಿತು.ಸಖಿಯ ದಯೆ ಮತ್ತು ನಿಷ್ಠೆ ಸೇವಾ ಮನೋಭಾವನೆ ಮತ್ತು ಕರುಣೆಯ ನಿಜವಾದ ಪ್ರತಿಬಿಂಬವಾಗಿದೆ. ಅವರ ಉಪಸ್ಥಿತಿಗೆ ನಾವು ಕೃತಜ್ಞರಾಗಿದ್ದೇವೆ ಮತ್ತು ಇಂತಹ ಇನ್ನಷ್ಟು ಒಗ್ಗಟ್ಟಿನ ಕ್ಷಣಗಳನ್ನು ಎದುರುನೋಡುತ್ತಿದ್ದೇವೆ.

ರಾಜೇಶ್ವರಿ ಫೌಂಡೇಶನ್, ಹೈದರಾಬಾದ್ **9490463146**

ಇತ್ತೀಚೆಗೆ ನಮ್ಮ ರಾಜೇಶ್ವರಿ ವೃದ್ಧಾಶ್ರಮದಲ್ಲಿ ರಕ್ಷಾಬಂಧನ್ ಮತ್ತು ಸ್ವಾತಂತ್ರ್ಯ ದಿನಾಚರಣೆಯನ್ನು ಆಯೋಜಿಸಿದ ಮಾಯಾ ಕೇರ್ ಫೌಂಡೇಶನ್‌ಗೆ ನಾನು ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ. ಸ್ವಯಂಸೇವಕರು ಆಶ್ರಮದ ಸುತ್ತಮುತ್ತ ಸಂತೋಷ ಮತ್ತು ಹರ್ಷಭರಿತ ವಾತಾವರಣವನ್ನು ನಿರ್ಮಿಸಿದರು. ನಮ್ಮ ಹಿರಿಯ ನಾಗರಿಕರಿಗೆ ಇದು ಅದ್ಭುತ ಮತ್ತು ಅಚ್ಚರಿಯ ಕ್ಷಣವಾಗಿತ್ತು. ಸ್ವಯಂಸೇವಕರ ಕುಟುಂಬದ ರೀತಿಯ ಭಾಗವಹಿಸುವಿಕೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಎಲ್ಲರೂ ಮೆಚ್ಚಿದರು.

## ಮಾಯಕೇರ್ ಚಟುವಟಿಕೆಗಳು

1. ರಕ್ಷಾ ಬಂಧನ ಆಚರಣೆ – 9 ಆಗಸ್ಟ್ 2025 **.** ಮುಂಬೈ, ಪುಣೆ, ನಾಶಿಕ್, ನಾಗಪುರ, ಅಹಮದಾಬಾದ್, ಹೈದರಾಬಾದ್, ಬೆಂಗಳೂರು, ಜೈಪುರ, ದೆಹಲಿ, ಭೋಪಾಲ್ ನಗರಗಳಲ್ಲಿ ಒಟ್ಟು 31 ವೃದ್ಧಾಶ್ರಮಗಳನ್ನು ಮಾಯಾ ಕೇರ್ ಸ್ವಯಂಸೇವಕರು ಭೇಟಿಯಾಗಿ ರಕ್ಷಾ ಬಂಧನ ಹಬ್ಬವನ್ನು ಆಚರಿಸಿದರು. ಹಿರಿಯರು ಸ್ವಯಂಸೇವಕರಿಗೆ ರಾಖಿ ಕಟ್ಟಿದರು, ತಮ್ಮ ಜೀವನ ಕಥೆಗಳನ್ನು ಹಂಚಿಕೊಂಡರು ಮತ್ತು ಆಶೀರ್ವಾದ ನೀಡಿದರು.
2. ಕೆ. ರ್. ಪುರಂ ಸರ್ಕಾರಿ ಆಸ್ಪತ್ರೆಯಲ್ಲಿ ಮಾಯಕೇರ್ ವತಿಯಿಂದ ಉಚಿತ ಮಾಸ್ಕ್ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು
3. ಮಾಯಾ ಕೇರ್ ಫೌಂಡೇಶನ್ ಬೆಂಗಳೂರು H2O ಸೀನಿಯರ್ ಕೇರ್ ಹೋಮ್‌ನಲ್ಲಿ ಯಶಸ್ವಿಯಾಗಿ ಆರೋಗ್ಯ ಶಿಬಿರವನ್ನು ನಡೆಸಿತು, ಹಿರಿಯರಿಗೆ ಅಗತ್ಯ ವೈದ್ಯಕೀಯ ಸೇವೆ ಮತ್ತು ಆತ್ಮೀಯತೆ ಒದಗಿಸಿತು. ಡಾ. ಭಾಸ್ಕರ್ ಅವರ ಭೇಟಿ ಮತ್ತು ಪರಿಶೀಲನೆಗೆ ವಿಶೇಷ ಧನ್ಯವಾದಗಳು. ಬಿಂದು ತಂಡದ ಸದಸ್ಯೆ ಸವಿತಾ ಮತ್ತು ಸ್ವಯಂಸೇವಕ ತೀರ್ಥರಾಮೇಶ್ವರ ಅವರ ಶ್ರಮದಿಂದ ಶಿಬಿರ ಯಶಸ್ವಿಯಾಗಿ ನಡೆಯಿತು.
4. ಅರೋಹಣ ಇನ್ಫೋಸಿಸ್ ಸಾಮಾಜಿಕ ಪ್ರಭಾವ ಪ್ರಶಸ್ತಿಗಳ ಅಂತಿಮ ಹಂತ : ಮಾಯಾ ಕೇರ್ ಪ್ರತಿಷ್ಠಿತ ಅರೋಹಣ ಇನ್ಫೋಸಿಸ್ ಪ್ರಶಸ್ತಿಗಳ ಅಂತಿಮ ಹಂತವನ್ನು ತಲುಪಿದೆ. ಸೌಮ್ಯಾ ಮತ್ತು ಪಲ್ಲವಿ ಅವರು ಮಾಯಾ ಕೇರ್‌ನ ಮಾದರಿ ಮತ್ತು ಪ್ರಾಜೆಕ್ಟ್ ಬಿಂದು ಯೋಜನೆಯ ಮಾಪನೀಯ ಪ್ರಭಾವವನ್ನು ತೋರಿಸುವ ಶಕ್ತಿಶಾಲಿ ಪ್ರಸ್ತುತಿಯನ್ನು ನೀಡಿದರು. ಸಮರ್ಪಿತ ಸ್ವಯಂಸೇವಕಿ ನೇಹಾ ಅವರು ಈ ಪ್ರಸ್ತುತಿಯಲ್ಲಿ ಸಹಾಯ ಮಾಡಿ ಜೊತೆಯಾಗಿ ಭಾಗವಹಿಸಿದರು.

## ಜಯ ಕಿಶೋರ್ ಅವರ ಜೀವನ ಪಥ (ಬಿಂದು ತಂಡದ ಸದಸ್ಯ)



ನಾನು ಜಯ ಕಿಶೋರ್, ಆಂಧ್ರಪ್ರದೇಶದ ಒಂದು ಸಣ್ಣ ಪಟ್ಟಣದಲ್ಲಿ ಜನಿಸಿದ್ದೆ. ನನ್ನ ಬಾಲ್ಯವು ಸ್ನೇಹಿತರೊಂದಿಗೆ ಆಟವಾಡುವ ಸಂತೋಷದಿಂದ ತುಂಬಿತ್ತು. ಚಿಕ್ಕ ವಯಸ್ಸಿನಿಂದಲೇ ಕ್ರಿಕೆಟ್ ನನ್ನ ಹವ್ಯಾಸವಾಗಿತ್ತು. ಟಿವಿಯಲ್ಲಿ ಕ್ರಿಕೆಟ್ ನೋಡುತ್ತಿದ್ದಾಗ ಉತ್ಸಾಹದಿಂದ ತುಂಬುತ್ತಿದ್ದೆವು. ಶಾಲಾ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ, ಅಭ್ಯಾಸದಿಂದ ಕೌಶಲ್ಯ ಬೆಳೆಸಿ ಜಯಗಳಿಸಲು ಆರಂಭಿಸಿದ್ದೆ.

ಜೀವನ ಸುಗಮವಾಗಿತ್ತು, ಆದರೆ ಒಂದು ದುಃಖದ ದಿನದಲ್ಲಿ ನನ್ನ ತಾಯಿ, ತಂಗಿ ಮತ್ತು ನಾನು ನನ್ನ ತಂದೆಯ ಮರಣವನ್ನು ಕಣ್ಣಾರೆ ನೋಡಿದೆವು. ಆ ನೋವು ಮರೆಯಲಾಗದಂತಾಗಿತ್ತು. ವರ್ಷಗಳ ನಂತರ, ನಾನು ವಿದ್ಯುತ್ ತಂತ್ರಜ್ಞನಾಗಿ ಸರ್ಕಾರಿ ಉದ್ಯೋಗ ಪಡೆದೆ. ಆದರೆ ಮತ್ತೊಂದು ಆಘಾತ—ವಿದ್ಯುತ್ ಅಪಘಾತದಿಂದ ಮೂರು ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಯಿತು. ಈ ಘಟನೆಯಿಂದ ನಾನು ಭಾಗಶಃ ಅಂಗವಿಕಲನಾಗಿದ್ದೆ .ಮನೆಗೆ ಮರಳಿದ ನಂತರ, ತಾಯಿಯ ಬೆಂಬಲದಿಂದ ಫಿಸಿಯೋಥೆರಪಿಯ ಮೂಲಕ ನಿಧಾನವಾಗಿ ಚಲನೆ ಪುನಃ ಆರಂಭವಾಯಿತು. ನಾನು BA ಪದವಿ ಪಡೆಯಲು ನಿರ್ಧರಿಸಿ, ಆತ್ಮವಿಶ್ವಾಸ ಹೆಚ್ಚಿಸಲು ವಿವಿಧ ಗುಂಪುಗಳಲ್ಲಿ ಸೇರಿದೆ. ನನ್ನ CV ಅನ್ನು ಎನೇಬಲ್ ಇಂಡಿಯಾಗೆ ಕಳುಹಿಸಿ, 2023ರಲ್ಲಿ ಮಾಯಾ ಕೇರ್‌ನಲ್ಲಿ ಸೇರಿದೆ. ಈ ಅವಕಾಶ ನನ್ನ ಕೌಶಲ್ಯಗಳನ್ನು ಬೆಳೆಸಿತು, ಸಂವಹನ ಸಾಮರ್ಥ್ಯ ಹೆಚ್ಚಿಸಿತು. ಸವಾಲುಗಳನ್ನು ನಿಭಾಯಿಸುವ ಕಲಿಕೆ ನನ್ನ ಬದುಕಿನಲ್ಲಿ ಹೊಸ ಬೆಳಕು ತಂದಿತು.

ಇಂದು ನಾನು ಮಾಯಾ ಕೇರ್‌ನಲ್ಲಿ ಸಹಾಯಕ ಯೋಜನಾ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ತಾಯಿ ಮತ್ತು ಯೋಗ ಶಿಕ್ಷಕಿಯಾಗಿರುವ ತಂಗಿಗೆ ಸಂತೋಷ ನೀಡುತ್ತಿದ್ದೇನೆ. 2025ರೊಳಗೆ ಸುಲಭ ಪ್ರವೇಶವಿರುವ ಸಣ್ಣ ಮನೆ ನಿರ್ಮಿಸುವ ಕನಸು ನನಸಾಗಿಸಲು ಪ್ರಯತ್ನಿಸುತ್ತಿದ್ದೇನೆ. ದೇವರ ಕೈ ನಮ್ಮೊಂದಿಗೆ ಇದೆ ಎಂಬ ನಂಬಿಕೆಯಿಂದ ನಾನು ಮುನ್ನಡೆಯುತ್ತಿದ್ದೇನೆ

| | |
|---|---|
| <br>ಕಶಿಕ ಸೇವಾ ಟ್ರಸ್ಟಲ್ಲಿ ನಮ್ಮ ಸ್ವಯಂ ಸೇವಕಿ ಸಖಿ ರಕ್ಷಾ ಬಂಧನ ಆಚರಿಸಿದರು | <br>ರಾಜೇಶ್ವರಿ ವೃದ್ಧಾಶ್ರಮದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನಮ್ಮ ಸ್ವಯಂ ಸೇವಕಿ ಅನುರಾಧ ಆಚರಿಸಿದರು |
| <br>ಕೆ. ರ್. ಪುರಂ ಸರ್ಕಾರಿ ಆಸ್ಪತ್ರೆಯಲ್ಲಿ ಮಾಯಕೇರ್ ವತಿಯಿಂದ ಉಚಿತ ಮಾಸ್ಕ್ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು | <br>H2O ಸೇವಾಟ್ರಸ್ಟ್ ಲ್ಲಿ ಮಾಯಕೇರ್ ವತಿಯಿಂದ ಆರೋಗ್ಯ ತಪಾಸಣೆ ನಡೆಸಲಾಯಿತು. |

Year: 2nd Issue: 1st
ಅಕ್ಟೋಬರ್ - ಡಿಸೆಂಬರ್ 2025

Maya CARE Foundation
The next best thing to family

# MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

| | |
|---|---|
| ಮಾಯಾ ಕೇರ್ ಭಾರತದ 72 ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. | **FOR WHATSAPP** |
| ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ | **9552510400/9552510411**<br>**8055995966** |

ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ
1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

| | |
|---|---|
| **Website - www.mayacare.org** | **Email : service@mayacare.org** |

Merchant Name : MAYA CARE FOUNDATION
Mobile Number : 7721053535

Deduction under I-Tax Act is Available

NAME OF THE A/C - MAYA CARE FOUNDATION
NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

**UPI ID: mayacarefoundation@icici**

**Book-Post**

| **FROM:** | **TO:** |
|---|---|
| **MAYA CARE FOUNDATION**<br>1214 Shukrawar Peth, Africa House, Subhash Nagar, Lane no.04,Pune-411002 | **Shree / Shrimati**<br>____________________<br>____________________<br>____________________ |